doc-158
T-P-2

SATYAVADI Founded 1917 Regd. No. M. 1299

ಸತ್ಯವಾದಿ

(ಖಿರವುಸೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 156 | ಶನಿವಾರ 23-2-46 | ಬಿಡಿ ಪ್ರತಿ 3 ಪೈ

ಭಾರತದ ಅಂಚೆ ಮತ್ತು ತಂತಿ ನೌಕರರುಗಳ ಮಹಾ ಮುಷ್ಕರ

ಯುದ್ಧಾನಂತರ

ಯುದ್ಧಾನಂತರ ಈ ನಗೆಗೆಟ್ಟ ಪ್ರಪಂಚವು ಮತ್ತೊಂದು ಯುದ್ಧಕ್ಕೆ ಸಿದ್ಧವಾಗುತ್ತಿದೆ. ಆಟಂಬಾಂಬು ವಿಷಯವಾದ ಪರಿಶೋಧನೆಗಳ ಮಾತನ್ನು ಒತ್ತಟ್ಟಿಗಿಟ್ಟು ರಷ್ಯಾ ತನ್ನ ಮೂಡಲು ಬಡಗಲು ಸುಸಿದ್ದುಗಳ ಕತ್ತಿರ ರಕ್ಷಣಾ ದುರ್ಗಶ್ರೇಣಿಯನ್ನು ನಿರ್ಮಾಣ ಮಾಡುತ್ತಿದೆಯೆಂದು ಪಮಾಜಕರ ಬಂದಿದೆ. ತನಗೆ ಇತರ ರಾಜ್ಯಗಳ ಆಕ್ರಮಣದ ಇಚ್ಛೆಯಿಲ್ಲವೆಂದು ರಷ್ಯಾ ಹೇಳುತ್ತಿರುವಾದರೂ ಅದು ರಷ್ಯಾ ವಿಷಯದಲ್ಲಿ ಏನು ನಡೆಸುತ್ತಿರುವುದೆಂಬುದು ತಿಳಿದೇ ಇದೆ. ಮಿತ್ರ ರಾಜ್ಯ ಸಮಿತಿಯು ರಷ್ಯವನ್ನೇ ಆಗಲೀ ಯಾವ ಇತರ ಅಗ್ರ ರಾಜ್ಯವನ್ನೇ ಆಗಲೀ ಏನೂ ಮಾಡಲಾರದು. ಇದಕ್ಕೆ ಕಾರಣ ಅಗ್ರ ರಾಜ್ಯಗಳಿಗಿರುವ ವೀಟೋ ಅಧಿಕಾರವೇ.

'ವೀಟೋ' ಅಧಿಕಾರವೆಂದರೇನು? ಪ್ರಪಂಚ ಭದ್ರತಾ ಸಂಘದಲ್ಲಿ ಸಭ್ಯರಾಗಿರುವ ಅಮೇರಿಕಾ, ಬ್ರಿಟ್, ರಷ್ಯಾ, ಫ್ರಾನ್ಸು, ಚೈನಾ, ಈ ಐದು ಬೊಡ್ಡ ರಾಜ್ಯಗಳಲ್ಲಿ ಯಾರೊಬ್ಬರು ಅಧಿಕೀಕರಿಸದೆ ಹೋದರೂ ಯಾವ ತೀರ್ಮಾನವನ್ನೂ ಮಾಡಲಾಗದು. ಇದೇ ವೀಟೋ ಅಧಿಕಾರ. ಇದರಿಂದ ರಷ್ಯಾದ ಚರ್ಯೆಯನ್ನು ಕುರಿತು ತೀರ್ಮಾನ ಮಾಡಬೇಕಾಗಿದ್ದಲ್ಲಿ ರಷ್ಯಾ ಕೂಡ ಆ ತೀರ್ಮಾನವನ್ನು ಅಂಗೀಕರಿಸಿದರೇ ಆ ತೀರ್ಮಾನವಾಗುವಿಕೆ. ಯಾವ ರಾಜ್ಯ ತನ್ನ ಮೇಲಿನ ವಿರುದ್ಧ ತೀರ್ಮಾನಕ್ಕೆ ಸಮ್ಮತಿಸುವುದಿಲ್ಲ. ಆದ ದರಿಂದ ಯಾವ ಅಗ್ರರಾಜ್ಯದ ಮೇಲೆಯೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ. ಈ ಕಾರಣದಿಂದಲೇ ಆಟಂಬಾಂಬಿನ ರಹಸ್ಯವನ್ನು ಈ ಸಂಘದವರಿಗೆ ತಿಳಿಸುವದು ಅರ್ಥರಹಿತವೆಂದೂ, ನಿಷ್ಪ್ರಯೋಜನವೆಂದೂ ಲೂಯಿ ಫಿಷರರು ಬರೆದಿರುವರು. ಈ ಬಗೆಯಲ್ಲಿ ಪ್ರಪಂಚ ಭದ್ರತಾ ಸಂಘವು ಒಂದು 'ಫಾರ್ಸ' ಆದುದರಿಂದ ಪ್ರತಿರಾಜ್ಯವೂ ತನ್ನ ರಕ್ಷಣಾ ಭಕ್ಷಣಗಳನ್ನು ವೃದ್ಧಿಪಡಿಸಿಕೊಳ್ಳಲು ಆತುರಗೊಳ್ಳುತ್ತಿದೆ. ಕೆಲವು ದಿನಗಳು ಹೀಗೆಯೇ ಇದ್ದಲ್ಲಿ ಪುನಃ ಯುದ್ಧವೂ, ಮರಣ ಹೋಮವೂ ತಪ್ಪುವುದಿಲ್ಲ (ದಿ ವಾ)

ಕ್ಷಮೆ ಹೋಗಬೇಕು

ಭಾರತ ಆಹಾರ ನಿಯೋಗದೊಡನೆ ಸೂರ್ಕಿಸ್ ರವರು, ಭಾರತದಲ್ಲಿ ಕ್ಷಾಮ ದೇವತೆಯು ಆಟವನ್ನು ತೊಡೆದ ಹಾಕಬೇಕು ಎಂಬುದಾಗಿ ಹೇಳಿದರೆಂದು ಲಂಡನ್ ವರದಿ ತಿಳಿಸುತ್ತದೆ.

ಅಂಚೆ ನೌಕರರ ಮಹಾ ಮುಷ್ಕರ !

ಡೆಲ್ಲಿ 21— ಮಾರ್ಚ್ 11 ಕ್ಕೆ ಮುಷ್ಕರ ಪ್ರಾರಂಭಿಸಲಾಗುವುದೆಂದು ಪೋಸ್ಟ್ ಮತ್ತು ಟೆಲಿಗ್ರಾಫ್ ಡೈರೆಕ್ಟರಿಗೆ ಅಖಿಲ ಭಾರತ ಟೆಲಿಗ್ರಾಫ್ ಸಂಘದ ಸೆಕ್ರೆಟರಿಯವರು ನೋಟೀಸು ಕೊಟ್ಟಿದ್ದಾರೆ.

ಕುದುರೆ ಜೂಜಿನ ಪ್ರಕರಣ

ಸಿಡ್ನಿ ಫೆ 20— ಬೂಬಾಯಿನ ಟರ್ಫ್ ಕ್ಲಬ್ಬಿನವರು ಆಸ್ಟ್ರೇಯಾ ಟ್ರೇಡರ್ ಹಿಗಿನ್ಸ್‌ಗೆ ಜೂಜಿನ ಕುದುರೆಗಳಿಗೆ ನೂದಕ ಪದಾರ್ಥ ಸೇವಿಸಿದಸೆಂದು ಎಚ್ಚರಿಕೆ ಕೊಟ್ಟಿದ್ದಕ್ಕಾಗಿ ಹಿಗಿನ್ಸ್ ಕ್ಲಬ್ಬಿನ ಮೇಲೆ ರೂ 315 00) ಪರಿಹಾರಕ್ಕಾಗಿ ದಾವಾ ಹೂಡಿರುವನೆಂದು ಹೇಳಲಾಗಿದೆ.

ಕಸ್ತೂರಿ ಬಾ ಕುಷ್ಠರೋಗಿ ನಿಲಯ

ಬೆಲ್ಲೂರು ಫೆ 18— ದ. ಖಿಕಾರ್ಟಿನ ಕಂದಚ್ಚಿಪುಂದಲ್ಲಿ ಒಂದು ಕಸ್ತೂರಿ ಬಾ ಕುಷ್ಠರೋಗಿಗಳ ನಿಲಯವನ್ನು ಸ್ಥಾಪಿಸಲು ಗಾಂಧೀಜಿ ಒಪ್ಪಿದ್ದಾರೆ.

ಸರ್ಕಾರದ ಸಹಾಯ

ಬೆಂಗಳೂರು ಫೆ 21— ಮೈಸೂರು ಸರಕಾರವರು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹಳ್ಳಿಹಳ್ಳಿಗೆ ಹೋಗಿಬರಲು ಅನುಕೂಲಿಸಲೂ ಮತ್ತು ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಲೂ 155 ಸಾವಿರ ರೂ, ಸ್ಯಾಂಕ್ಷನ್ ಮಾಡಿದ್ದಾರೆ.

ಲಕ್ಷ್ಮೀಕಾಂತಂ ಕೊಲೆ ಪ್ರತಿಧ್ವನಿ

ಮದರಾಸು ಫೆ 23— ಲಕ್ಷ್ಮೀಕಾಂತಂ ಖೂನಿ ವೊಬದ್ದಮೆಯಲ್ಲಿ ಅಪರಾಧಿಯಾಗಿದ್ದು ಜೀವನಾವಧಿ ಶಿಕ್ಷೆಗೆ ಗುರಿಯಾಗಿರುವ ಎಸ್. ಎಸ್. ಕೃಷ್ಣನ್ ಪರ ಪ್ರಿವೀಕೌನ್ಸಿಲ್ಲಿಗೆ ಅಪೀಲು ಮಾಡಲು ವಿಶೇಷ ಅನುಮತಿ ಪಡೆಯುವ ಪ್ರಯತ್ನ ಸಫಲವಾಗಿದೆ. ಪ್ರಾಸಿಕ್ಯೂಷನ್ ಅಧಿಕಾರ್ಯಗಳನ್ನು ಸರಕಾರದವರು ಲಂಡನ್ನಿನ ಸರ್ಕಾರಿ ಸಲಿಸಿಟರಿಗೆ ಕಳುಹಿಸಲು ಏರ್ಪಾಡಾಗಿದೆ.

ಬೊಂಬಾಯಿ ಗೋಳಿಬಾರ್ ಮಿಲ್ಟ್ರಿ ಬಂತು

ಬೊಂಬಾಯಿ ಫೆ 22 — ಬೊಂಬಾಯಿನಲ್ಲಿ ಗಲಭೆಯಾಗಿ, ಪೋಲೀಸರು ಬಹಳ ಸಾರಿ ಗುಂಡುಹಾರಿಸಿದರೆಂದೂ, ಬ್ರಿಟಿಷ್ ಸೈನ್ಯವೂ ಗುಂಡುಹಾರಿಸಿತೆಂದೂ ತುಂಬಾ ಸಾವುನೋವು ಆಗಿರುವುದೆಂದೂ ತಿಳಿಯಬಂದಿದೆ.

ರಾಜಗೋಪಾಲಚಾರ್ಯರು

ರಾಜಾಜಿಯವರು ಶಾಸನ ಸಭೆಗೆ ನಿಲ್ಲುವುದಿಲ್ಲವೆಂದು ಗಾಂಧೀಜಿ ಅಪ್ಪಣೆ ಕೇಳಿದ್ದಾರೆ.

Chitrakot -Asthma Spesific

Only one dose of which relieves dreaded disease permanantly to be taken on 17-3-46 Fullmoon. Apply atonce.

Manager, **Shubh Chintak Karyalaya,** CHITRAKOT
(Dist, Banda)

ಬ್ರಿಟಿಷ್ ಸರ್ಕಾರದ ನೀತಿ ಏನು ?

ಬ್ರಿಟಿಷ್ ಸಾಮ್ರಾಜ್ಯದ ಪರರಾಷ್ಟ್ರ ಸಚಿವ ಮಿ || ಬೇವಿಂ ತನ್ನ ಹೇಳಿಕೆಯಲ್ಲಿ ಏಷ್ಯಾ ರಾಜ್ಯಗಳಿಗೆಲ್ಲ ಸ್ವಾತಂತ್ರ್ಯ ಪಡೆಯಲು ಸಹಾಯವನ್ನು ಮಾಡುವುದೇ ನಮ್ಮ ಸರ್ಕಾರದ ನೀತಿಯಾಗಿದೆ! ಎಂದು ತಿಳಿಸಿರುವನು. ಏಷ್ಯಾ ಬ್ರಿಟನ್ನುಗಳ ಸಂಬಂಧದಲ್ಲಿ ಯಾವ ಭೀತಿಗೂ ಆಸ್ಪದವಿಲ್ಲವೆಂದಿರುವನು.

ಬೊಂಬಾಯಿ ದಂಗೆಯ ಭೀಕರ ಪರಿಸ್ಥಿತಿ

ಬೊಂಬಾಯಿ ದಂಗೆಯ ಪರಿಸ್ಥಿತಿ ಭೀಕರವಾಗಿದೆ. ಅನೇಕ ಸಾರಿ ಗುಂಡುಗಳನ್ನು ಹಾರಿಸಲಾಯಿತು. ಮಿಲಿಟರಿ ನಿರ್ಬಂಧ ತೆಗೆಯುವವರೆಗೂ ಅನ್ನವನ್ನು ಮುಟ್ಟುವುದಿಲ್ಲವೆಂದು ರೇಟಿಂಗುಗಳು ನಿರ್ಣಯವನ್ನು ಪ್ರಮುಖ ಸೇನಾಧಿಕಾರಿಗಳಿಗೆ ಕಳುಹಿಸಿದ್ದಾರೆ. ಸರ್ದಾರ ಪಟೇಲರು ಅಸಾಫ್ ಅಲಿ ಮೂಲಕ ಸಂಧಾನ ನಡೆಸುತ್ತಿರುವರು. ಬೊಂಬಾಯಿ ದಂಗೆಯನ್ನು ಕುರಿತು ಅಟ್ಲಿಯು ಹೆಚ್ಚು ಬ್ರಿಟಿಷ್ ಹಡಗುಗಳು ಬೊಂಬಾಯಿಗೆ ಹೋಗುತ್ತಿರುವುದಾಗಿ ಕಾಮನ್ಸ್ ಸಭೆಯಲ್ಲಿ ನುಡಿದರು. ಶ್ರೀ ಮಸಾನಿಯವರು ಕೇಂದ್ರ ಸಭೆಯಲ್ಲಿ ಬೊಂಬಾಯಿನ ಘಟನೆಯನ್ನು ಕುರಿತು ನಿಲುವಳಿ ಸೂಚನೆ ತಂದಿರುವರು. ದಂಗೆಯನ್ನು ಮುರಿಯುವುದಾಗಿ ನೈಸ್ ಅಡ್ಮಿರಲ್ ಗಾಡೆಫ್ರೆರವರು ಆಕಾಶವಾಣಿ ಭಾಷಣವನ್ನು ಮಾಡಿದರು.

ಅನ್ನ ಪರಿಸ್ಥಿತಿ ವಿಷಮ

ಭಾರತದ ಆಹಾರ ಪರಿಸ್ಥಿತಿ ಕೆಟ್ಟಿರುವುದೆಂದು ಬಂಗಾಳ ಸ್ಥಿತಿ ಉತ್ತಮವೆಂದು ಕ್ಯಾಸೆ ಹೊನಲೂಲುವಿನಲ್ಲಿ ಹೇಳಿದ

ನೇತಾಜಿ

ಕನ್ನಡಮ್ಮನ ಕೃತಜ್ಞತೆ

ನೇತಾಜಿ ಸುಭಾಷ್‌ಚಂದ್ರ ಬೋಸರ ಮಹಜ್ಜೀವನವನ್ನು ಕನ್ನಡ ಭಾಷೆಯಲ್ಲಿ ಚಿತ್ರಿಸುವ ಮಹೋದ್ಯಮವನ್ನು ಕೈಗೊಳ್ಳಲು ಮೈಸೂರು ನವಜ್ಯೋತಿ ಸ್ಟೂಡಿಯೋದವರು ಪ್ರಯತ್ನಿಸುತ್ತಿರುವುದಾಗಿ ತಿಳಿಯಬಂದಿದೆ.

ಅಮೇರಿಕಾದಲ್ಲಿ ಮೇಹರೋಗ

ಯುನೈಟೆಡ್ ಸ್ಟೇಟ್ಸ್ ಪಬ್ಲಿಕ್ ಹೆಲ್ತ್ ಸರ್ವಿಸ್‌ನವರು ಹೊರಡಿಸಿದ ಒಂದು ವರದಿಯನ್ವಯ ನ್ಯೂಯಾರ್ಕಿನಲ್ಲಿ ವೇಹ ರೋಗ ಹುಡಲು ತಾಲಾ ಹುಡುಗಿಯರೇ ಬಹುಳ ನುಟ್ಟಗೆ ಕಾರಣರಾಗಿದ್ದಾರೆಂದು ತಿಳಿಯಲಾಗಿದೆ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮೇಹ ರೋಗದಿಂದಾಗುವ ಹಾನಿಯ ಸಂಬಂಧ ಎಚ್ಚರಿಕೆ ಕೊಡುವ ಭಾಷಣಗಳನ್ನೇರ್ಪಡಿಸಬೇಕು ಎಂಬುದಾಗಿ ಪಬ್ಲಿಕ್ ಹೆಲ್ತ್ ಸರ್ವೀಸಿನ ವೈದ್ಯರು ಅಮೇರಿಕ ಪಬ್ಲಿಕ್ ಹೆಲ್ತ್ ಎಸೋಸಿಯೇಷನ್ನಲ್ಲಿ ಭಾಷಣ ಮಾಡಿರುತ್ತಾರೆ. ಭೂಗರ್ಭ ಟ್ರೈನು ಜಾಹೀರಾತಿನಲ್ಲಿ ಈ ರೋಗ ಸಂಬಂಧವಾದ ಸರಳ ಸಂದೇಶಗಳನ್ನು ಪ್ರಚಾರಕ್ಕಿಳಿಸಿದರೆ ಅದರಿಂದಲೂ ತಂಬಾ ಪ್ರಚಾರಕ್ಕಿಳಿಸಿದರೆ ಅದರಿಂದಲೂ ತುಂಬಾ ಪ್ರಯೋಜನವಾಗಬಹುದೆಂದು ವೈದ್ಯರು ಅಭಿಪ್ರಾಯಪಡುತ್ತಾರೆ. 1944 ರಲ್ಲಿ ಯುದ್ಧದ ಮುಂಚಿತವಾಗಿದ್ದುದಕ್ಕಿಂತ ಮೂರು ಪಾಲು ಅಧಿಕವಾಗಿ ವೇಶ್ಯಾ ರೋಗ ನ್ಯೂಯಾರ್ಕ್ ಹುಡುಗಿಯರಲ್ಲಿ ಹರಡಿದೆಯೆಂದೂ ದಾಖಲೆಗಳಿಂದ ತಿಳಿದುಬಂದಿದೆ.

ಹಸಕ ಬಿಟ್ಟಿದವುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

At Opera —
3 ನೇ ವಾರ
ಪರಂಜ್ಯೋತಿ
ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಾತ್ರಧಾರಿಗಳು
ಮುಂದಿನ ವಿನೋದ
ಸುರೇಂದ್ರ, ಮೇಹತಾಬ್
ಪಾತ್ರವಹಿಸಿರುವ
ವಿಶ್ವಾಸ್

At Ranjit
2 nd Week
TAQDEER
ತಕದೀರ್
ನಾಗೇಶ್, ಮೋತಿಲಾಲ್, ಚಾಲಿ

ಉಡುಪುಗಳನ್ನು ಅತಿ ಬೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು
ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಸೆಂಟ್-ಸೋಪ್ ಫ್ಯಾಕ್ಟರಿ, ಬೆಂಗಳೂರು.

Sri Krishnarajendra Mills, Ltd., Mysore.

NOTICE

Interim dividend for the half year ended
31 st December 1945.

At the Meeting of the Board of Directors held on 17 th February 1946, the Directors have resolved to pay an nterim dividend, free of Mysore incometax, at the rate of Rs, 1-8-0 for each fully paid-up share (12 p. c. per annum) for the period of six months ended 31 st December 1945.

The transfer books of the Company will be cloaed from 16 th to 20 th March 1946, both days inclusive. The interim dividend warrants will be posted on and after the 7 th April 1946 to all shareholders whose names stand on the Register of Members of the Company on 16 th March 1946.

By Order of the Board
B. S. Visweswariya
Secretary

Mysore
17 th Feb. 1946

ರಕವದಿಗೆ — ಧಾತುಪುಷ್ಟಿಗೆ
ಸಂಜೀವನ
ಶಕ್ತಿಸುಧಾ
ಬೆಲೆ ಡಬ್ಬಿಂಗೆ ರೂ. ೧.೪-೦
ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing
L. N. Press
Sriramapura MYSORE